**<u>ಒ.ಎಸ್.ನಂಬ್ರಃ 164/2017 ಡಿ.ಡಬ್ಲ್ಯೂ : 1</u>**

ದಿನಾಂಕಃ 25-06-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**<u>ಮುಂದುವರಿದ ಪಾಟಿ ಸವಾಲುಃ ವಾದಿ ಪರ ಶ್ರೀ. ಸಿ.ಆರ್.ಪಿ ವಕೀಲರಿಂದ</u>**

1. ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ವಾದಿಯವರ ಜಮೀನಿನಲ್ಲಿರುವ ದಾರಿ 8 ಕುಟುಂಬಗಳ ಮನೆಗಳಿಗೆ ತಲುಪುತ್ತಿದ್ದು ಆ 8 ಕುಟುಂಬಗಳ ಜಮೀನುಗಳ ಭೂ ಪರಿವರ್ತನೆ ಆಗಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಜಾಗ ಶೆಡ್ಯೂಲ್ ಬಿ ಸ್ವತ್ತು ಭೂ ಪರಿವರ್ತನೆ ಆಗಿರುವುದಿಲ್ಲ. ಭೂ ಪರಿವರ್ತನೆ ಆಗಬೇಕಾದರೇ ದಾರಿ ಇರುವುದನ್ನು ತೋರಿಸಬೇಕು ಎಂದರೆ ಸರಿ. ನಮ್ಮ ಜಮೀನಿಗೆ ದಾರಿ ಇಲ್ಲದೇ ಇರುವುದರಿಂದ ನಮ್ಮ ಜಮೀನು ಭೂ ಪರಿವರ್ತನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ದಾರಿ ಇರುತ್ತದೆ ಎಂದು ನುಡಿಯುತ್ತಾರೆ . ನಾನು ನಿಶಾನೆ ಡಿ1,2,3 ಮತ್ತು9 ಫೋಟೋಗಳನ್ನು ಹಾಜರುಪಡಿಸಿರುತ್ತೇನೆ ಎಂದರೆ ಸದರಿ ಫೋಟೋಗಳನ್ನು ಗಂಗಾಧರ್ ಶೆಟ್ಟಿ ರವರು ತೆಗೆಸಿರುತ್ತಾರೆ . ನಂದು ಅವರದು ಆಸ್ತಿ ಜಂಟಿ ಇರುವುದರಿಂದ ಅವರ ತೆಗೆಸಿ ಕೊಟ್ಟಿರುತ್ತಾರೆ ಸದರಿ ಫೋಟುಗಳನ್ನು ಯಾವ ಉಪಕರಣದಿಂದ ತೆಗೆದಿರುತ್ತಾರೆ ಎಂದರೆ ಗೊತ್ತಿಲ್ಲ. ನಿಶಾನೆ ಡಿ10 ನ್ನು ಯಾವ ಕಂಪ್ಯೂಟರ್ ನಿಂದ ತೆಗೆಯಲಾಗಿರುತ್ತದೆ ಎಂದರೆ ಗೊತ್ತಿಲ್ಲ .

2. ನಿಶಾನೆ ಡಿ4 ರಿಂದ 6 ಹಾಜರುಪಡಿಸಿರುತ್ತೇನೆ ಎಂದರೆ ಸರಿ . ಸದರಿ ದಾಖಲೆಗಳ ಬಗ್ಗೆ ನಮ್ಮ ಮನೆಯ ಪಕ್ಕದವರು ಹೇಳಿರುತ್ತಾರೆ . ಸಾಕ್ಷಿ ನನಗೆ ಪ್ರವೀಣ್ ಹಂದೆ ಅವರೇ ಹೇಳಿರುತ್ತಾರೆ ಎಂದು ನುಡಿಯುತ್ತಾರೆ .ಸದರಿ ದಾಖಲೆಗಳನ್ನು ನಾನೇ ತೆಗೆಸಿರುತ್ತೇನೆ . ಪ್ರವೀಣ್ ಹಂದೆ ರವರು ಸಲ್ಲಿಸಿದ ಪ್ರಕರಣ ಅಂತಿಮ ಘಟ್ಟ ತಲುಪಿದ ಬಗ್ಗೆ ಗೊತ್ತಿರುತ್ತಾದಾ ಎಂದರೆ ಸಾಕ್ಷಿ ಅಂತಿಮ ಘಟ್ಟ ತಲುಪಿರುತ್ತದೆ ಎಂದು ನುಡಿಯುತ್ತಾರೆ . ಅಸಲು ದಾವಾ ಸಂಖ್ಯೆ 187/2017 ರ ವಿರುದ್ಧ ಸುದರ್ಶನ್ ಶೆಟ್ಟಿರವರು ಇನ್ನೊಂದು ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿ ಅದು ವಜಾವಾಗಿರುತ್ತದೆ ಎಂದು ನುಡಿಯುತ್ತಾರೆ. ಅದು ವಜಾವಾಗಿರುತ್ತದೆ ಅಂತ ನಮ್ಮ ವಕೀಲರು ಹೇಳಿರುತ್ತಾರೆ .

3. ಅಸಲು ದಾವಾ ಸಂಖ್ಯೆಃ 187/2017 ಅಂತಿಮ ಘಟ್ಟ ತಲುಪಿರುವುದಿಲ್ಲ ಎಂದರೆ ಸರಿಯಲ್ಲ.ವಾದಿಯವರ ಜಾಗದಲ್ಲಿ ದಾರಿ ಇದೆ ಅಂತ ತೋರಿಸಲು ನ್ಯಾಯಲಯದ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಾಖಲೆಗಳನ್ನು

ಹಾಜರುಪಡಿಸಿರುವುದಿಲ್ಲ, ಸಾಕ್ಷಿ ಅನಾದಿಕಾಲದಿಂದಲೂ ದಾರಿ ಇರುತ್ತದೆ ಎಂದು ನುಡಿಯುತ್ತಾರೆ . ವಾದಿಯವರ ಜಾಗದಲ್ಲಿ ನನಗೆ ದಾರಿ ಹಕ್ಕು ಇರುವುದಿಲ್ಲ ಎಂದರೆ ಸಾಕ್ಷಿ ಅಲ್ಲಿ ದಾರಿ ಇರುತ್ತದೆ ಎಂದು ಹೇಳಿರುತ್ತಾರೆ . ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ .

**ಮರುವಿಚಾರಣೆ ಇಲ್ಲ.**

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ .**